KACM500005192021

Presented on : 07-09-2021
Registered on : 07-09-2021
Decided on : --
Duration :

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ನರಸಿಂಹರಾಜಪುರ**

**ಸಿ. ಸಿ. ನಂ. 399/2021**

**ದಿನಾಂಕಃ 14.01.2022**

**ಫಿರ್ಯಾದುದಾರರುಃ** ಶ್ರೀ ಶಿವಕುಮಾರ ಎಲ್ ಬಿನ್ ಲೇಟ್ ಲಕ್ಷ್ಮಣ ರಾವ್ ಸುಮಾರು 57 ವರ್ಷ, ವಾಸ ವಾರ್ಡ್ ನಂ. 1, ಟಿ.ಬಿ. ರಸ್ತೆ, ನ.ರಾ.ಪುರ ಟೌನ್ ಮತ್ತು ತಾಲ್ಲೂಕು.

-ವಿರುದ್ಧ-

**ಆರೋಪಿಃ** ಶ್ರೀ ಹರೀಶ ಬಿನ್ ವಿಠಲ ರಾವ್, ಸುಮಾರು 42 ವರ್ಷ, ವಾಸ ಹೌಸಿಂಗ್ ಬೋರ್ಡ್ ಕಾಲೋನಿ, ವಾರ್ಡ್ ನಂ.11, ನ.ರಾ.ಪುರ ಟೌನ್ ಮತ್ತು ತಾಲ್ಲೂಕು.

- - -

**ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 313ರ ಪ್ರಕಾರ ಆರೋಪಿ ಹೇಳಿಕೆ**

ಪ್ರಃ 1ಃ ಫಿರ್ಯಾದುದಾರರ ಸಾಕ್ಷ್ಯ ಪ್ರಮಾಣ ಪತ್ರವನ್ನು ಓದಿದ್ದೀರಾ?

ಉಃ ಹೌದು

ಪ್ರಃ2 ಫಿರ್ಯಾದುದಾರರು ತಮ್ಮ ಸಾಕ್ಷ್ಯದಲ್ಲಿ ನೀವು ಮತ್ತು ಅವರು ಪರಿಚಯಸ್ಥರಾಗಿದ್ದು 2021 ನೇ ಜನವರಿ ಮಾಹೆಯ ಕೊನೆಯ ವಾರದಲ್ಲಿ ಅವರ ಬಳಿ ಕೈಸಾಲವಾಗಿ ರೂ. 4,00,000/- ಗಳನ್ನು ಪಡೆದುಕೊಂಡು ಸದರಿ ಹಣವನ್ನು ಐದು ತಿಂಗಳಲ್ಲಿ ವಾಪಾಸ್ಸು ಮಾಡುವುದಾಗಿ ತಿಳಿಸಿರುತ್ತೀರಿ ಎಂದು ನುಡಿದಿದ್ದಾರೆ, ಇದಕ್ಕೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

ಉಃ ಸುಳ್ಳು

Harish V

ಪ್ರ:3: ಪಿರ್ಯಾದಿದಾರರು ಮುಂದುವರೆದು ನೀವು ಹಣ ಕೊಡದಿದ್ದಾಗ ಅನೇಕ ಬಾರಿ ನಿಮ್ಮನ್ನು ಕೇಳಿದ್ದು ನಂತರ ನೀವು ದಿನಾಂಕ 09.07.2021 ಕ್ಕೆ ನಗದಾಗುವಂತೆ ಚೆಕ್ ನಂ. 189503 ನ್ನು 4,00,000/- ರೂ.,ಗಳಿಗೆ ಕೆನರಾ ಬ್ಯಾಂಕ್, ನ.ರಾ.ಪುರ ಶಾಖೆಯ ಮೂಲಕ ನಗದೀಕರಣಕ್ಕಾಗಿ ಸಿ.ಡಿ.ಸಿ.ಸಿ. ಬ್ಯಾಂಕ್, ನ.ರಾ.ಪುರ ಶಾಖೆಗೆ ಹಾಜರುಪಡಿಸಿದ್ದು ಆದರೆ ನಿಮ್ಮ ಖಾತೆಯಲ್ಲಿ ಚೆಕ್ ನಗದೀಕರಿಸಲು ಸಾಕಷ್ಟು ಹಣ ಇಲ್ಲಾ ಎಂಬ ಹಿಂಬರಹದೊಂದಿಗೆ ದಿನಾಂಕ 12.07.2021 ರಂದು ವಾಪಸ್ಸಾಯಿತು ಎಂದು ನುಡಿದಿದ್ದಾರೆ, ಇದಕ್ಕೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

ಉ:

ಸುಳ್ಳು

ಪ್ರ:4: ಪಿರ್ಯಾದಿದಾರರು ಮುಂದುವರೆದು ಅವರು ಸದರಿ ಚೆಕ್ ನಗದಾಗದೇ ವಾಪಸ್ಸು ಬಂದಿರುವ ವಿಚಾರವನ್ನು ನಿಮಗೆ ತಿಳಿಸಿದಾಗ ನೀವು ಯಾವುದೇ ಕ್ರಮ ಕೈಗೊಳ್ಳದಿದ್ದಾಗ ಅವರು ದಿನಾಂಕ 29.07.2021 ರಂದು ವಕೀಲರ ಮೂಲಕ ನೋಟೀಸ್ ತಲುಪಿದ 15 ದಿನದೊಳಗೆ ಚೆಕ್ ನ ಹಣವನ್ನು ಮರುಪಾವತಿ ಮಾಡುವಂತೆ ಕೋರಿ ನೋಂದಾಯಿತ ಅಂಚೆ ಮುಖಾಂತರ ನೋಟೀಸ್ ನೀಡಿದ್ದು, ದಿನಾಂಕ 02.08.2021 ರಂದು ನಿಮಗೆ ಸದರಿ ನೋಟೀಸ್ ಜಾರಿಯಾದರೂ ಸಹ ಅದಕ್ಕೆ ಮರು ಉತ್ತರವನ್ನಾಗಲೀ ಅಥವಾ ಚೆಕ್ ನ ಹಣವನ್ನಾಗಲೀ ಇದುವರೆಗೂ ಕೊಟ್ಟಿಲ್ಲವೆಂದು ನಿಮಗೆ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ವಿಚಾರ ಗೊತ್ತಿದ್ದರೂ ಮತ್ತು ಚೆಕ್ ಕೊಟ್ಟ ನಂತರ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಡದೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಚೆಕ್ ನ್ನು ಕೊಟ್ಟು, ಚೆಕ್ ವಾಪಾಸ್ಸಾಗಲು ಕಾರಣರಾಗಿರುತ್ತೀರಿ ಎಂದು ನುಡಿದಿದ್ದಾರೆ, ಇದಕ್ಕೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

ಉ:

ಸುಳ್ಳು

ಪ್ರಶ್ನೆ:5: ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೆ?

*ಉತ್ತರ:*

ಇಲ್ಲ

***ಪ್ರಶ್ನೆ :6: ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?***

***ಉತ್ತರ:***

ಇದೆ

Harsha v.

ಸಿ. ಸಿ. ನಂ. **399/2021**

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : 14.1.2022

14/01/2022

(ಹರೀಶ ಕೆ ಎಂ. )
ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ:
ನ.ರಾ.ಪುರ.

Harisha V.

ಆರೋಪಿ ಸಹಿ: